ದಿನಾಂಕಃ 08.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ**

ದಿ ಃ 14.12.1992 ರ ವಿಲ್ ನ್ನು ಈಗ ಸದ್ಯಕ್ಕೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ. ದಿಃ14.12.1992 ರ ವಿಲ್ ನೋಂದಣಿಯಾಗಿದೆಯಾ ಎಂದರೆ ಇಲ್ಲ . ಅನಿಲ್ ಕುಮಾರ್ ರವರಿಗೆ ಸ್ವತ್ತು ವರ್ಗಾವಣೆಯಾದ ನಂತರ ಅವರ ಹೆಸರಿಗೆ ಖಾತೆಯಾಗಿತ್ತೆ ಎಂದರೆ ನನಗೆ ಗೊತ್ತಿಲ್ಲ. ಅನಿಲ್ ಕುಮಾರ್ ರವರು ಅರುಣ್ ಕುಮಾರ್ ರವರಿಗೆ ಬರೆದ ನೀವು ಹಾಜರುಪಡಿಸಿದ ದಾನಪತ್ರದಲ್ಲಿ ನಮೂದು ಆಗಿದೆಯೇ ಎಂದರೆ ನನಗೆ ಗೊತ್ತಿಲ್ಲ. ದಿ ಃ 14.12.1992 ರ ವಿಲ್ ನ್ನು ನೀವು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ . ದಿ ಃ 14.12.1992 ರ ವಿಲ್ ನಿಮ್ಮ ಬಳಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ ನಾನು ಪರಿಶೀಲಿಸಬೇಕು . ನೀವು ಸ್ವತ್ತನ್ನು ಖರೀದಿ

ಮಾಡುವ ಕಾಲಕ್ಕೆ ವಾದಿಯವರು ಸ್ವತ್ತನ್ನು ಖರೀದಿಸಿದ್ದರು , ಅವರ ಹೆಸರಿನಲ್ಲಿ ಖಾತೆಯೂ ಆಗಿ ಇ ಸಿ ಯಲ್ಲಿ ಅದರ ಬಗ್ಗೆ ನಮೂದು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಇಸಿ ಯಲ್ಲಿ ನೀವು ಖರೀದಿ ಮಾಡುವ ಕಾಲಕ್ಕೆ ವಾದಿಯ ಕ್ರಯಪತ್ರದ ಬಗ್ಗೆ ನಮೂದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 02.09.1995 ರಿಂದ ದಾವೆ ಹಾಕುವ ಕಾಲಕ್ಕೆ ಮತ್ತು ಈಗಲೂ ಸಹ ವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಾವೇ ಸ್ವಾಧೀನದಲ್ಲಿ ಇದ್ದೇವೆ . 1995 ರಿಂದ ದಾವಾ ಸ್ವತ್ತಿನ ವಾದಿಯೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನಮ್ಮ ಸ್ವತ್ತಿಗೆ ನಾವು ಕಟ್ಟುತ್ತಿದ್ದೇವೆ . ನಿಪಿ 41 ವಾದಿಯವರ ಹೆಸರಿನಲ್ಲಿದೆ ಎಂದರೆ ಸರಿ . ನೀರಿನ ಬಿಲ್ ನ್ನು ವಾದಿಯೇ ಕಟ್ಟುತ್ತಿದ್ದಾರೆ ಅವರ ಹೆಸರಿನಲ್ಲಿಯೇ ಬಿಲ್ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

17

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.